ದಿನಾಂಕ:21.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಟಿ ಎಸ್ ವಕೀಲರಿಂದಃ**

ದಯಾನಂದ ಇವರ ತಾತನ ಹೆಸರು ಹಟ್ಟಜ್ಜ. ಹಟ್ಟಜ್ಜನ ಹೆಂಡತಿ ಹೆಸರು ಯಲ್ಲಮ್ಮ. ಹಟ್ಟಜ್ಜ ಮತ್ತು ಯಲ್ಲಮ್ಮನಿಗೆ ಜಯರಾಮ್, ದಯಾನಂದ, ಮಂಜುನಾಥ, ಆಶಾರಾಣಿ ಎಂಬ 4 ಜನ ಮಕ್ಕಳು. ಅವರೆಲ್ಲರೂ ಹರ್ತಿಕೋಟೆ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ನಿಜ. 1976 ರಲ್ಲಿ ನನ್ನ ಗಂಡ ದಯಾನಂದ್, ಮಂಜುನಾಥ, ಜಯರಾಮ್ ಇವರು ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನಿಜ. ದಯಾನಂದರವರಿಗೆ ಯಾವ ಯಾವ ಸ್ವತ್ತುಗಳು ಪಾಲುವಿಭಾಗದ ಮೂಲಕ ಬಂದಿವೆ ಎಂಬ ಬಗ್ಗೆ ನನಗೆ ಮಾಹಿತಿ ಇದೆ. ಆದರೆ ಈಗ ನೆನಪಿಲ್ಲ. ದಯಾನಂದರವರು ಅಮೃತವೇಣಿಯನ್ನು 1980 ರಲ್ಲಿ ಮದುವೆಯಾಗಿದ್ದರು ಎಂದರೆ ಸಾಕ್ಷಿ ನನಗೆ ಇಸವಿ ನೆನಪಿಲ್ಲ ಆದರೆ ಮದುವೆಯಾಗಿದ್ದರು ಎಂದು ನುಡಿಯುತ್ತಾರೆ. ಅಮೃತವೇಣಿಗೆ ಕವಿತ, ಕ್ರಿಯ, ವೈಷ್ಣವಿ ಯಾನೆ ಕಾವ್ಯ ಎನ್ನುವ ಮಕ್ಕಳು ಇದ್ದಾರೆ ಎಂದರೆ ನಿಜ. ದಯಾನಂದರವರಿಗೆ ಅಮೃತವೇಣಿ ಮತ್ತು ಅವರ ಮೂರು ಜನ ಮಕ್ಕಳು ಕಾನೂನು ಬದ್ಧ ವಾರಸುದಾರರು ಎಂದರೆ ನಿಜ.

1976 ರಲ್ಲಿ ಪಾಲು ವಿಭಾಗದ ಮೂಲಕ ಬಂದ ಆಸ್ತಿಯನ್ನು ದಯಾನಂದ್ ರವರು ಮಾರಾಟ ಮಾಡಿದ್ದಾರೆ. ಆ ರೀತಿ ಮಾರಾಟ ಮಾಡಿದ ಹಣದಿಂದ ಬೀರೇನಹಳ್ಳಿ ಗ್ರಾಮದ ಸರ್ವೆ ನಂ.109/25, 109/26 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆಸ್ತಿಯನ್ನು ಮಾರಾಟ ಮಾಡಿ ಬಂದ ಹಣದಿಂದ ದಯಾನಂದರವರು ಸರ್ವೆ ನಂ.109/25, 109/6 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಯಾನಂದ್ ರವರು ಅಮೃತವೇಣಿಯವರಿಂದ ವಿಚ್ಚೇದನ ಪಡೆದಿಲ್ಲ ನನಗೆ ಗೊತ್ತಿಲ್ಲ. ನಾನು ದಯಾನಂದ್ ರವರ ಹೆಂಡತಿ ಎಂದು ತೋರಿಸಲು ದಾಖಲೆ ಹಾಜರು ಪಡಿಸಿದ್ದೇನೆ. ನಾನು ದಯಾನಂದ್ ರವರ ಹೆಂಡತಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ದಯಾನಂದ್ ರವರು ಅಪಘಾತದಿಂದ ಮೃತಪಟ್ಟಿದ್ದಾರೆ. 2009 ರಲ್ಲಿ ಅಪಘಾತವಾಗಿದೆ. 25.10.2010 ರಲ್ಲಿ ದಯಾನಂದ್ ರವರು ಮೃತ ಪಟ್ಟಿದ್ದಾರೆ. ಅಪಘಾತದಿಂದ ದಯಾನಂದ್ ರವರು ಸಾಯುವವರೆಗೂ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ನಿಜ. ಅವರು ಹಾಸಿಗೆ ಇಡಿದಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಓಡಾಡುತ್ತಿದ್ದರು ಮತ್ತು ಊಟ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ದಯಾನಂದ್ ರವರಿಗೆ ಶುಗರ್ ಲೆವಲ್ 500 ಇರುತ್ತಿತ್ತು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಹೆಚ್ಚು ಕಡಿಮೆಯಾಗುತ್ತಿತ್ತು. ಶುಗರ್ ಲೆವೆಲ್ ಒಮ್ಮೆ 500 ಆಗಿ ಕಡಿಮೆಯಾಗುತ್ತಿತ್ತು ಎಂದರೆ ನಿಜ ದಯಾನಂದ್ ರವರಿಗೆ ಶುಗರ್ ಲೆವೆಲ್ ಹೆಚ್ಚು ಕಡಿಮೆಯಾಗುತ್ತಿದ್ದರಿಂದ ಅವರಿಗೆ ಜ್ಞಾಪಕ ಶಕ್ತಿ ಇರುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು